**All India Radio: Bangalore**
**National Bulletin In Kannada**
**27.03.2025  13.10 p.m.**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**27.03.2025  13.10 p.m.**
**<><><><>**

ಮುಖ್ಯಾಂಶಗಳು

1. ವ್ಯಾಪಾರದ ಕುರಿತು ಭಾರತ-ಅಮೆರಿಕ ಸಕ್ರಿಯ ಚರ್ಚೆ - ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್
2. ವಯನಾಡು ಭೂಕುಸಿತದಲ್ಲಿ ಬದುಕುಳಿದವರಿಗಾಗಿ ನಿರ್ಮಾಣವಾಗಲಿರುವ ವಸತಿ ಪಟ್ಟಣ ಯೋಜನೆಗೆ ಇಂದು ಕೇರಳ ಮುಖ್ಯಮಂತ್ರಿ ಅಡಿಪಾಯ
3. ಅಮೆರಿಕ ಪ್ರವೇಶಿಸುವ ಎಲ್ಲ ಆಮದು ವಾಹನಗಳ ಮೇಲೆ ಶೇಕಡ ೨೫ರಷ್ಟು ಸುಂಕ ವಿಧಿಸಿದ ಅಮೆರಿಕ ಅಧ್ಯಕ್ಷ ಡೋನಾಲ್ಡ್ ಟ್ರಂಪ್
4. ಐಪಿಎಲ್ ಟಿ-೨೦ ಕ್ರಿಕೆಟ್ : ಇಂದು ಸನ್‌ರೈಸರ್ಸ್ ಹೈದರಾಬಾದ್-ಲಖನೌ ಸೂಪರ್ ಜೈಂಟ್ಸ್ ಮುಖಾಮುಖಿ

<><><><>

ವ್ಯಾಪಾರದ ಕುರಿತು ಭಾರತ ಮತ್ತು ಅಮೆರಿಕ ಅತ್ಯಂತ ಸಕ್ರಿಯ ಮತ್ತು ತೀವ್ರವಾದ ಚರ್ಚೆಗಳನ್ನು ನಡೆಸುತ್ತಿವೆ ಎಂದು ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ಹೇಳಿದ್ದಾರೆ. ಅಮೆರಿಕದೊಂದಿಗೆ ಇಂಧನ ಸಂಬಂಧಗಳನ್ನು ಹೆಚ್ಚಿಸುವ ಹಾಗೂ ಭಾರತದ ದೀರ್ಘಕಾಲಿನ ಬೆಳವಣಿಗೆ ಮತ್ತು ಅಭಿವೃದ್ಧಿಗೆ ನಿರ್ಣಾಯಕವಾದ ಸ್ಥಿರ, ಸಮಂಜಸ ಇಂಧನ ವಾತಾವರಣವಿರುವಂತೆ ನೋಡಿಕೊಳ್ಳುವತ್ತ ಗಮನ ಹರಿಸಲಾಗುತ್ತಿದೆ ಎಂದು ಅವರು ಮಾಹಿತಿ ನೀಡಿದರು. ಈ ವರ್ಷದ ಅಂತ್ಯದ ವೇಳೆಗೆ ಭಾರತ ಮತ್ತು ಅಮೆರಿಕ ನಡುವೆ ದ್ವಿಪಕ್ಷೀಯ ವ್ಯಾಪಾರ ಒಪ್ಪಂದ ಮಾಡಿಕೊಳ್ಳುವ ನಿಟ್ಟಿನಲ್ಲಿ ದ್ವಿಪಕ್ಷೀಯ ಮಾತುಕತೆ ವೇಳೆ ಪ್ರಧಾನಿ ನರೇಂದ್ರ ಮೋದಿ ಮತ್ತು ಅಮೆರಿಕ ಅಧ್ಯಕ್ಷ ಡೋನಾಲ್ಡ್ ಟ್ರಂಪ್, ತೆಗೆದುಕೊಂಡ ನಿರ್ಧಾರಗಳು ಫಲಿತವಾಗಲಿದೆ ಎಂದು ಸಚಿವ ಡಾ. ಎಸ್. ಜೈಶಂಕರ್ ಹೇಳಿದರು.

ಧ್ವನಿ : ಡಾ. ಎಸ್. ಜೈಶಂಕರ್ (೧೯ ಸೆಕೆಂಡ್‌ಗಳು)

<><><><>

೨೦೨೨ರ ನವೆಂಬರ್‌ನಿಂದ ೨೦೨೫ರ ಫೆಬ್ರವರಿಯವರೆಗೆ ಕೇಂದ್ರೀಕೃತ ಸಾರ್ವಜನಿಕ ಕುಂದುಕೊರತೆ ಪರಿಹಾರ ಮತ್ತು ಮೇಲ್ವಿಚಾರಣೆ ವ್ಯವಸ್ಥೆ - ಸಿಪಿಜಿಆರ್‌ಎಎಂಎಸ್ ಅಡಿಯಲ್ಲಿ ೫೬ ಲಕ್ಷಕ್ಕೂ ಹೆಚ್ಚು ಕುಂದು-ಕೊರತೆಗಳನ್ನು ಪರಿಹರಿಸಲಾಗಿದೆ ಎಂದು ಕೇಂದ್ರ ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆ ಮತ್ತು ಪಿಂಚಣಿ ಖಾತೆ ರಾಜ್ಯ ಸಚಿವ ಡಾ. ಜಿತೇಂದ್ರ ಸಿಂಗ್ ತಿಳಿಸಿದ್ದಾರೆ. ಲೋಕಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಲಿಖಿತ ಉತ್ತರ ನೀಡಿದ ಅವರು, ೨೦೨೨ರ ನವೆಂಬರ್‌ನಿಂದ ೧ ರಿಂದ ೨೦೨೫ರ ಫೆಬ್ರವರಿ ೨೮ರವರೆಗೆ ಸಿಪಿಜಿಆರ್‌ಎಎಂಎಸ್ ನಲ್ಲಿ ಒಟ್ಟು ೫೨ ಲಕ್ಷದ ೩೬ ಸಾವಿರದ ೮೪೪ ಕುಂದುಕೊರತೆಗಳನ್ನು ಸ್ವೀಕರಿಸಲಾಗಿದೆ ಹಾಗೂ ೫೬ ಲಕ್ಷದ ೬೩ ಸಾವಿರದ ೮೪೯ ಕುಂದುಕೊರತೆಗಳನ್ನು ವಿಲೇವಾರಿ ಮಾಡಲಾಗಿದೆ ಎಂದು ಅವರು ಮಾಹಿತಿ ನೀಡಿದರು. ಫೆಬ್ರವರಿ ೨೮ರ ವೇಳೆಗೆ ಭಾರತ ಸರ್ಕಾರದ ಸಚಿವಾಲಯಗಳು, ಇಲಾಖೆಗಳಲ್ಲಿ ೫೯ ಸಾವಿರದ ೯೪೬ ಸಾರ್ವಜನಿಕ ಕುಂದುಕೊರತೆ ಪ್ರಕರಣಗಳು ಬಾಕಿ ಉಳಿದಿವೆ. ಸಿಪಿಜಿಆರ್‌ಎಎಂಎಸ್ ಮೂಲಕ ಸಾರ್ವಜನಿಕರು ಕುಂದುಕೊರತೆಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಬಹುದು ಎಂದು ಸಚಿವ ಜಿತೇಂದ್ರ ಸಿಂಗ್ ತಿಳಿಸಿದರು. ಕೇಂದ್ರ ಸರ್ಕಾರವು ಸಾರ್ವಜನಿಕ ಕುಂದುಕೊರತೆ ವ್ಯವಸ್ಥೆಗೆ ಸಮಗ್ರ ಮಾಹಿತಿ ತಂತ್ರಜ್ಞಾನ ಪರಿಹಾರಗಳನ್ನು ಅಭಿವೃದ್ಧಿಪಡಿಸುವ ಪ್ರಕ್ರಿಯೆಯಲ್ಲಿದೆ ಎಂದು ಇದೇ ವೇಳೆ ಅವರು ಮಾಹಿತಿ ನೀಡಿದರು.

<><><><>

ಏಷ್ಯಾದ ಅತಿ ಉದ್ದದ ಸುರಂಗ - ಜಮ್ಮು ಮತ್ತು ಕಾಶ್ಮೀರದಲ್ಲಿರುವ ಝೋಜಿಲಾ ಸುರಂಗದ ಸುಮಾರು ಶೇಕಡ ೭೦ ರಷ್ಟು ಕೆಲಸ ಪೂರ್ಣಗೊಂಡಿದೆ. ಶ್ರೀನಗರ ಮತ್ತು ಲಡಾಖ್ ನಡುವೆ ಸರ್ವಋತು ಸಂಪರ್ಕವನ್ನು ಒದಗಿಸುವ ಈ ಯೋಜನೆಯನ್ನು ಐದು ಸಾವಿರದ ೫೦೦ ಕೋಟಿ ರೂಪಾಯಿಗಳಿಗೂ ಹೆಚ್ಚು ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ. ಲೋಕಸಭೆಯಲ್ಲಿ ಪೂರಕ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ಝೋಜಿಲಾ ಸುರಂಗ ಯೋಜನೆಯು ಒಟ್ಟು ೩೦ ಕಿಲೋಮೀಟರ್‌ಗಳಿಗಿಂತ ಹೆಚ್ಚು ಉದ್ದವಿದೆ. ಅಲ್ಲದೇ, ಜಮ್ಮು ಮತ್ತು ಕಾಶ್ಮೀರದಲ್ಲಿ ಎರಡು ಲಕ್ಷ ಕೋಟಿ ಮೌಲ್ಯದ ರಸ್ತೆ ಮೂಲಸೌಕರ್ಯ ಯೋಜನೆಗಳನ್ನು ಜಾರಿಗೆ ತರಲಾಗುತ್ತಿದೆ. ಸಂಪರ್ಕವನ್ನು ಮತ್ತಷ್ಟು

ಸುಧಾರಿಸಲು ಜಮ್ಮು ಮತ್ತು ಕಾಶ್ಮೀರದಲ್ಲಿ ೧೦೫ ಸುರಂಗಗಳನ್ನು ಸಹ ನಿರ್ಮಿಸಲಾಗುತ್ತಿದೆ ಎಂದು ಅವರು ಮಾಹಿತಿ ನೀಡಿದರು.

<><><><>

ಕೇರಳದ ವಯನಾಡಿನಲ್ಲಿ ಕಳೆದ ವರ್ಷ ಸಂಭವಿಸಿದ ಭೂಕುಸಿತದದಲ್ಲಿ ಬದುಕುಳಿದವರಿಗಾಗಿ ನಿರ್ಮಾಣವಾಗಲಿರುವ ವಸತಿ ಪಟ್ಟಣ ಯೋಜನೆಗೆ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಇಂದು ಸಂಜೆ ಅಡಿಪಾಯ ಹಾಕಲಿದ್ದಾರೆ. ಕಲ್ಪೆಟ್ಟಾದ ಎಲ್ಸ್ಟನ್ ಎಸ್ಟೇಟ್‌ನಲ್ಲಿ ಈ ಮಾದರಿ ಪಟ್ಟಣ ನಿರ್ಮಿಸಲಾಗುತ್ತದೆ. ಈ ಪಟ್ಟಣವು ಏಳು ಸೆಂಟ್ಸ್ ಪ್ಲಾಟ್‌ಗಳಲ್ಲಿ ತಲಾ ೪೩೦ ಮನೆಗಳನ್ನು ಹೊಂದಲಿದೆ. ಅಲ್ಲದೇ ಸಮುದಾಯ ಕೇಂದ್ರಗಳು, ಮಾರುಕಟ್ಟೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಅಂಗನವಾಡಿಗಳಂತಹ ಆಧುನಿಕ ಸೌಲಭ್ಯಗಳನ್ನು ಹೊಂದಲಿದೆ. ಈ ಪಟ್ಟಣದಲ್ಲಿ ಸೌರಶಕ್ತಿ ವ್ಯವಸ್ಥೆ ಹಾಗೂ ಕಲುಷಿತ ನೀರನ್ನು ಸಂಸ್ಕರಿಸುವ ಘಟಕಗಳೂ ಇರಲಿವೆ. ಕಳೆದ ವರ್ಷ ಜುಲೈನಲ್ಲಿ ವಯನಾಡು ಜಿಲ್ಲೆಯ ಮೇಪಾಡಿ ಗ್ರಾಮ ಪಂಚಾಯತ್‌ನ ಮುಂಡಕ್ಕೈ, ಚೂರಲ್ಮಾಲಾ ಮತ್ತು ಅಟ್ಟಮಾಲಾ ಪ್ರದೇಶಗಳಲ್ಲಿ ಸಂಭವಿಸಿದ ಭೂಕುಸಿತವು ೨೬೬ ಜೀವಗಳನ್ನು ಬಲಿ ತೆಗೆದುಕೊಂಡಿತ್ತು.

<><><><>

ಜಮ್ಮು-ಕಾಶ್ಮೀರದ ಕಟ್ರಾ-ಬಾರಾಮುಲ್ಲಾ ನಡುವಿನ ಮೊದಲ ರೈಲಿಗೆ ಏಪ್ರಿಲ್ ೧೯ ರಂದು ಪ್ರಧಾನಿ ನರೇಂದ್ರ ಮೋದಿ ಅವರು, ಹಸಿರು ನಿಶಾನೆ ತೋರಲಿದ್ದಾರೆ. ಈ ಮೂಲಕ ಜಮ್ಮುವಿನಿಂದ ಕಾಶ್ಮೀರಕ್ಕೆ ರೈಲು ಸಂಪರ್ಕ ಕಲ್ಪಿಸುವ ೭೦ ವರ್ಷಗಳ ಕನಸು ಈಡೇರಲಿದೆ. ಈ ರೈಲು ರಿಯಾಸಿ ಜಿಲ್ಲೆಯ ಕಟ್ರಾದಿಂದ ಹೊರಟು ಪಿರ್‌ಪಂಜಾಲ್ ಪರ್ವತದ ಮೂಲಕ ಶ್ರೀನಗರಕ್ಕೆ ಆಗಮಿಸಲಿದೆ. ನಂತರ ಅಂತಿಮವಾಗಿ ಉತ್ತರ ಕಾಶ್ಮೀರದ ಬಾರಾಮುಲ್ಲಾ ತಲುಪಲಿದೆ. ಸಮಾರಂಭದಲ್ಲಿ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ಕೇಂದ್ರ ಸಚಿವ ಡಾ. ಜಿತೇಂದ್ರ ಸಿಂಗ್, ಜಮ್ಮು-ಕಾಶ್ಮೀರ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಮತ್ತು ಜಮ್ಮು-ಕಾಶ್ಮೀರ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಉಪಸ್ಥಿತರಿರಲಿದ್ದಾರೆ. ಇದೇ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು, ಕಟ್ರಾದ ಮಾತಾ ವೈಷ್ಣೋದೇವಿ ದೇಗುಲಕ್ಕೆ ಭೇಟಿ ನೀಡಲಿದ್ದಾರೆ. ಅಂದು ಮಧ್ಯಾಹ್ನ ಕಟ್ರಾದಲ್ಲಿ ಸಾರ್ವಜನಿಕ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಲಿದ್ದಾರೆ ಎಂದು ಐಎಎನ್‌ಎಸ್ ಸುದ್ದಿ ಸಂಸ್ಥೆ ವರದಿ ಮಾಡಿದೆ.

<><><><>

ಅಮೆರಿಕಕ್ಕೆ ಪ್ರವೇಶಿಸುವ ಎಲ್ಲ ಆಮದು ವಾಹನಗಳ ಮೇಲೆ ಶೇಕಡ ೨೫ರಷ್ಟು ಸುಂಕವನ್ನು ವಿಧಿಸುವ ನಿರ್ಧಾರವನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ. ಹೊಸ ಆಮದು ತೆರಿಗೆಗಳು ಏಪ್ರಿಲ್ ೨ ರಿಂದ ಜಾರಿಗೆ ಬರಲಿದೆ. ಇದೇ ವೇಳೆ ಅಂದು, ಅಮೆರಿಕದ ವ್ಯಾಪಾರ ಕೊರತೆಗೆ ಬಹುಪಾಲು ಕಾರಣವಾಗಿರುವ ದೇಶಗಳನ್ನು ಗುರಿಯಾಗಿಟ್ಟುಕೊಂಡು ಪರಸ್ಪರ ಸುಂಕಗಳನ್ನು ಘೋಷಿಸಲು ಡೋನಾಲ್ಡ್ ಟ್ರಂಪ್ ಮುಂದಾಗಿದ್ದಾರೆ. ಈ ಕ್ರಮವು ಅಮೆರಿಕದೊಳಗೆ ಹೆಚ್ಚಿನ ಉತ್ಪಾದನಾ ಸೌಲಭ್ಯಗಳನ್ನು ಸ್ಥಾಪಿಸಲು ಕಾರು ತಯಾರಕರನ್ನು ಪ್ರೋತ್ಸಾಹಿಸುವ ಗುರಿಯನ್ನು ಹೊಂದಿದೆ ಎಂದು ಅಮೆರಿಕ ಅಧ್ಯಕ್ಷರು ಹೇಳಿದ್ದಾರೆ.

<><><>

ಮಕ್ಕಳ ಸಾವಿನ ಸಂಖ್ಯೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಭಾರತದ ಪ್ರಯತ್ನಗಳು ಜಗತ್ತಿಗೆ ಮಾದರಿ ಎಂದು ವಿಶ್ವಸಂಸ್ಥೆ ಶ್ಲಾಘಿಸಿದೆ. ಆಯುಷ್ಮಾನ್ ಭಾರತ್‌ನಂತಹ ಆರೋಗ್ಯ ಉಪಕ್ರಮಗಳನ್ನು ಇದೇ ವೇಳೆ ವಿಶ್ವಸಂಸ್ಥೆ ಉಲ್ಲೇಖಿಸಿದೆ. ಮಕ್ಕಳ ಮರಣ ಪ್ರಮಾಣದ ಕುರಿತು ವಿಶ್ವಸಂಸ್ಥೆಯ ಆಂತರಿಕ ಸಂಸ್ಥೆಯ ವರದಿಯ ಪ್ರಕಾರ, ೨ ಸಾವಿರದ ಇಸವಿಯಿಂದ ಇಲ್ಲಿಯವರೆಗೆ ಭಾರತದಲ್ಲಿ ೫ ವರ್ಷದೊಳಗಿನ ಮಕ್ಕಳ ಸಾವಿನ ಪ್ರಮಾಣ ಶೇಕಡ ೭೦ರಷ್ಟು ತಗ್ಗಿದೆ. ಅಲ್ಲದೇ ನವಜಾತ ಶಿಶುಗಳ ಮರಣ ಪ್ರಮಾಣ ಶೇಕಡ ೬೧ ರಷ್ಟು ಕಡಿಮೆಯಾಗಿದೆ. ಆರೋಗ್ಯ ಕ್ಷೇತ್ರದಲ್ಲಿ ಹೂಡಿಕೆಯ ಮೂಲಕ ಭಾರತ ಲಾಭಗಳಿಸಿದೆ ಎಂದು ವಿಶ್ವಸಂಸ್ಥೆ ಹೇಳಿದೆ.

<><><>

ಇಸ್ರೇಲ್ ಸೇನೆಯು ಗಾಜಾದಲ್ಲಿ ತನ್ನ ವಾಯು ಮತ್ತು ಭೂ ಕಾರ್ಯಾಚರಣೆಗಳನ್ನು ತೀವ್ರಗೊಳಿಸಿದ್ದು, ಮಾರ್ಚ್ ೧೮ ರಿಂದ ಇಲ್ಲಿಯವರೆಗೆ ೪೩೦ಕ್ಕೂ ಹೆಚ್ಚು ಸ್ಥಳಗಳ ಮೇಲೆ ದಾಳಿ ಮಾಡಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ. ಈ ಎಲ್ಲ ದಾಳಿಗಳು ಭಯೋತ್ಪಾದನೆ ವಿರುದ್ಧವಾಗಿದೆ ಎಂದು ಇಸ್ರೇಲ್ ಸೇನೆ ತಿಳಿಸಿದೆ. ಕದನ ವಿರಾಮದ ನಂತರ ಯುದ್ಧ ಪುನರ್ ಆರಂಭವಾದಾಗಿನಿಂದ ಸುಮಾರು ೮೩೦ ಮಂದಿ ಸಾವನ್ನಪ್ಪಿದ್ದಾರೆ ಎಂದು ಗಾಜಾದ ಆರೋಗ್ಯ ಅಧಿಕಾರಿಗಳು ತಿಳಿಸಿದ್ದಾರೆ.

<><><>

ಹೈದರಾಬಾದ್‌ನ ರಾಜೀವ್‌ಗಾಂಧಿ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿಂದು ನಡೆಯುವ ಇಂಡಿಯನ್ ಪ್ರೀಮಿಯರ್ ಲೀಗ್-ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ ಸನ್‌ರೈಸರ್ಸ್

ಹೈದರಾಬಾದ್ ಮತ್ತು ಲಕ್ನೋ ಸೂಪರ್ ಜೈಂಟ್ಸ್ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ರಾತ್ರಿ ೭.೩೦ಕ್ಕೆ ಆರಂಭವಾಗಲಿದೆ.

<><><><>

ಇಂಡಿಯನ್ ಓಪನ್ ಸ್ಕ್ವಾಷ್‌ನಲ್ಲಿ, ನಂಬರ್ ಒನ್ ಸ್ಥಾನದಲ್ಲಿರುವ ಅನಾಹತ್ ಸಿಂಗ್, ಇಂದು ನಡೆಯಲಿರುವ ಮಹಿಳೆಯರ ಸೆಮಿಫೈನಲ್ ಪಂದ್ಯದಲ್ಲಿ ಜೋಶ್ನಾ ಚಿನ್ನಪ್ಪ ಅವರನ್ನು ಎದುರಿಸಲಿದ್ದಾರೆ. ಪಂದ್ಯ ಸಂಜೆ ೬:೩೦ ಕ್ಕೆ ಆರಂಭವಾಗಲಿದೆ. ಇನ್ನೊಂದೆಡೆ, ಇಂದು ನಡೆಯುವ ಪುರುಷರ ಸೆಮಿಫೈನಲ್‌ನಲ್ಲಿ ಅಭಯ್ ಸಿಂಗ್, ಈಜಿಪ್ಟ್‌ನ ಕರೀಮ್ ಎಲ್ ಹಮ್ಮಮಿ ಅವರನ್ನು ಎದುರಿಸಲಿದ್ದಾರೆ. ಪಂದ್ಯ ಸಂಜೆ ೭:೧೫ ಕ್ಕೆ ಆರಂಭವಾಗಲಿದೆ.

<><><><>

ಖೇಲೋ ಇಂಡಿಯಾ ಪ್ಯಾರಾ ಗೇಮ್ಸ್ ೨೦೨೫ ಇಂದು ಸಂಜೆ ಅದ್ದೂರಿ ಸಮಾರೋಪ ಸಮಾರಂಭದೊಂದಿಗೆ ಮುಕ್ತಾಯಗೊಳ್ಳಲಿದೆ. ಭಾರತೀಯ ಕ್ರೀಡಾ ಪ್ರಾಧಿಕಾರವು ಆಯೋಜಿಸಿರುವ ಈ ಸಮಾರಂಭವನ್ನು ಕೇಂದ್ರ ಯುವ ವ್ಯವಹಾರಗಳು ಮತ್ತು ಕ್ರೀಡಾ ರಾಜ್ಯ ಖಾತೆ ಸಚಿವೆ ರಕ್ಷಾ ನಿಖಿಲ್ ಖಡ್ಸೆ ಉದ್ಘಾಟಿಸಲಿದ್ದಾರೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>